## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\2348\2014\ಉನಿವಿ–4 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:26/03/2018

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀಮತಿ.ಶಾಂತ ಬಿನ್ ಚಿಕ್ಕೂಸು, ಕಲಿಯೂರು ಗ್ರಾಮ, ಟಿ.ನರಸೀಪುರ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*********

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಕಲಿಯೂರು ಗ್ರಾಮದ ನಿವಾಸಿಯಾದ ಶ್ರೀಮತಿ.ಶಾಂತ ಬಿನ್ ಚಿಕ್ಕೂಸು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಕಲಿಯೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ರಾಜಕುಮಾರ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಎದುರುದಾರರು ತಮ್ಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಕುಂತೂರು ಸಕ್ಕರೆ ಕಾರ್ಖಾನೆಗೆ ಪಂಚಾಯತ್ ನಡವಳಿಯಿಲ್ಲದೆ ಕಾವೇರಿ ನೀರು ಸರಬರಾಜಿಗೆ ನಿರಾಪೇಕ್ಷಣಾ ಪತ್ರವನ್ನು ₹5 ಲಕ್ಷ ಪಡೆದು ಕೊಟ್ಟಿದ್ದಾರೆ. ನೀರು ಸರಬರಾಜಿಗೆ ಬಿಲ್ ಇಲ್ಲದೆ ₹6 ಲಕ್ಷ ಹಣವನ್ನು ಬ್ಯಾಂಕ್‌ನಿಂದ ಪಡೆದಿದ್ದಾರೆ. ವಸತಿಯುಳ್ಳವರಿಗೆ ಮನೆಗಳನ್ನು ಕೊಟ್ಟಿದ್ದಾರೆ. ಕೆಲವು ಫಲಾನುಭವಿಗಳಿಗೆ ವಿತರಿಸಿದ ಚೆಕ್‌ಗಳು ಅಮಾನ್ಯಗೊಂಡಿವೆ. ಶೌಚಾಲಯಗಳನ್ನು ನಿರ್ಮಿಸಲು ಫಲಾನುಭವಿಗಳ ಸಹಿ ಮಾಡಿಸಿ, ಬ್ಯಾಂಕ್‌ನಿಂದ ಹಣ ಡ್ರಾ ಮಾಡಿ, ಅವರ ಕೈಗೆ ಕೊಡಲಾಗಿದೆಯೆಂದು ಎದುರುದಾರರು ಹೇಳಿದ್ದಾರೆ. ಎದುರುದಾರರು ಈ ಹಿಂದೆಯೂ ಇದೇ ರೀತಿಯಾಗಿ ಅವ್ಯವಹಾರ ಮಾಡಿ, ಮೂರು ಬಾರಿ ಅಮಾನತ್ತುಗೊಂಡಿರುವುದಾಗಿ ಹೇಳಿದ್ದಾರೆ.

3. ದೂರಿನ ಬಗ್ಗೆ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ –

ಗ್ರಾಮ ಪಂಚಾಯತ್ ಅನುಮೋದನೆ ಪಡೆಯದೆ, ಎದುರುದಾರರು ಹಾಗೂ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಶ್ರೀ.ಹೊನ್ನಮ್ಮ ರವರು ಬಣ್ಣಾರಿಅಮ್ಮನ್ ಸಕ್ಕರೆ ಕಾರ್ಖಾನೆ ಉಪಯೋಗಕ್ಕೆ ಕಾವೇರಿ ನದಿಯಿಂದ ನೀರು ಸರಬರಾಜು ಮಾಡಲು ವಿದ್ಯುಚ್ಛಕ್ತಿ ಸಂಪರ್ಕಕ್ಕೆ ನಿರಾಪೇಕ್ಷಣಾ ಪತ್ರವನ್ನು ದಿ:07/03/13ರಂದು ನೀಡಿದ್ದಾರೆ. ಈ ರೀತಿ ಗ್ರಾಮ ಪಂಚಾಯತ್ ಅನುಮೋದನೆ ಪಡೆಯದೆ ಪಂಚಾಯತ್ ರಾಜ್ ಅಧಿನಿಯಮ ಉಲ್ಲಂಘಿಸಿ ನಿರಾಪೇಕ್ಷಣಾ ಪತ್ರ ನೀಡಿರುವ ಬಗ್ಗೆ ಸದರಿಯವರಿಂದ ಸಮಜಾಯಿಷಿ ನೀಡಲು ತಿಳಿಸಿದೆಯೆಂದು ಹೇಳಿದ್ದಾರೆ. ಮುಂದುವರೆದು, ಎದುರುದಾರರು ಕಲಿಯೂರು ಗ್ರಾಮ ಪಂಚಾಯತ್‌ನಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಅವ್ಯವಹಾರ ಎಸಗಿದ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ವಿಚಾರಣೆ ನಡೆಸಿದೆಯೆಂದು ಹೇಳಿದ್ದಾರೆ.

4. ವರದಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರಿಗೆ ನೋಟೀಸ್ ಜಾರಿಯಾಗಿದ್ದು, ಆಕ್ಷೇಪಣೆಯನ್ನು ಸಲ್ಲಿಸಲು ಕಾಲಾವಕಾಶವನ್ನು ಎದುರುದಾರರು ದಿ:10/03/16ರ ಪತ್ರ ಮುಖೇನ ಕೋರಿದ್ದು, ಆಕ್ಷೇಪಣೆಯನ್ನು ಸಲ್ಲಿಸಿಲ್ಲ. ಆದರೆ, ತಮ್ಮ ಸೇವಾ ವಿವರಗಳನ್ನು ನೀಡಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಎದುರುದಾರರು ಕಲಿಯೂರು ಗ್ರಾಮ ಪಂಚಾಯತ್‌ನ ಕಾರ್ಯದರ್ಶಿ, ಗ್ರೇಡ್–2 ಹಾಗೂ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಲೆಕ್ಕ ಪರಿಶೋಧನಾ ವರದಿಯನ್ವಯ 2012–13 ಹಾಗೂ 2013–14ನೇ ಸಾಲಿನಲ್ಲಿ ಹಣ ದುರುಪಯೋಗ ಮಾಡಿದ್ದಾರೆಂಬ ಆಪಾದನೆಗಳ ಹಿನ್ನೆಲೆಯಲ್ಲಿ ಅವರ ವಿರುದ್ಧ 8 ಆರೋಪಗಳನ್ನು ಹೊರಿಸಿ, ದೋಷಾರೋಪಣ ಪಟ್ಟಿಯನ್ನು ಜಾರಿ ಮಾಡಲಾಗಿದ್ದು, ಸದರಿ ದೋಷಾರೋಪಣ ಪಟ್ಟಿಯಲ್ಲಿ, ಕುಂತೂರು ಗ್ರಾಮದಲ್ಲಿ ಬಣ್ಣಾರಿಅಮ್ಮನ್ ಸಕ್ಕರೆ ಕಾರ್ಖಾನೆಗೆ ಗ್ರಾಮ ಪಂಚಾಯತ್‌ನ ಅನುಮೋದನೆ ಪಡೆಯದೇ ಎದುರುದಾರರು ಹಾಗೂ ಪಂಚಾಯತ್‌ನ ಮಾಜಿ ಅಧ್ಯಕ್ಷರಾದ ಶ್ರೀಮತಿ.ಹೊನ್ನಮ್ಮ ರವರು ದಿ:07/09/13ರಂದು ನಿರಾಪೇಕ್ಷಣಾ ಪತ್ರವನ್ನು ನೀಡಿ ಕರ್ತವ್ಯ ಲೋಪ ಎಸಗಿದ ಬಗ್ಗೆ ಆಪಾದನೆಯಿಲ್ಲ. ಪಂಚಾಯತ್‌ನ ಅನುಮೋದನೆ ಪಡೆಯದೇ ಎದುರುದಾರರು ಹಾಗೂ ಪಂಚಾಯತ್‌ನ ಮಾಜಿ ಅಧ್ಯಕ್ಷರಾದ ಶ್ರೀಮತಿ.ಹೊನ್ನಮ್ಮ ರವರು ದಿ:07/09/13ರಂದು ಕುಂತೂರು ಗ್ರಾಮದಲ್ಲಿ ಬಣ್ಣಾರಿಅಮ್ಮನ್ ಸಕ್ಕರೆ ಕಾರ್ಖಾನೆಗೆ ನಿರಾಪೇಕ್ಷಣಾ ಪತ್ರವನ್ನು ನೀಡಿ ಪಂಚಾಯತ್ ರಾಜ್ ಅಧಿನಿಯಮವನ್ನು ಉಲ್ಲಂಘಿಸಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಆದ್ದರಿಂದ, 2012-13 ಹಾಗೂ 2013-14ನೇ ಸಾಲಿನಲ್ಲಿ ಹಣ ದುರುಪಯೋಗ ಮಾಡಿದ್ದಾರೆಂಬ ಆಪಾದನೆಗಳ ಹಿನ್ನೆಲೆಯಲ್ಲಿ ಎದುರುದಾರರ ವಿರುದ್ಧ ಈಗಾಗಲೇ ನಡೆದಿರುವ ಇಲಾಖಾ ವಿಚಾರಣಾ ವರದಿಯನ್ವಯ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 27/3

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.

26/03